## 1. ಮಾಡ್ಯೂಲ್ ಮತ್ತು ಇದರ ರಚನೆಯ ವಿವರಗಳು

| ಮಾಡ್ಯೂಲ್ ವಿವರ | |
|---|---|
| ವಿಷಯ | ಅರ್ಥಶಾಸ್ತ್ರ |
| ಕೋರ್ಸ್ | ಭಾರತೀಯ ಆರ್ಥಿಕ ಅಭಿವೃದ್ಧಿ 01<br>(ತರಗತಿ XI , ಸೆಮಿಸ್ಟರ್ - 1) |
| ಮಾಡ್ಯೂಲ್ ಶೀರ್ಷಿಕೆ | ಸ್ವಾತಂತ್ರ್ಯ ಪೂರ್ವದಲ್ಲಿ ಭಾರತೀಯ ಆರ್ಥಿಕ ವ್ಯವಸ್ಥೆ- ಭಾಗ 1 |
| ಮಾಡ್ಯೂಲ್ ಐಡಿ | keec_10101 |
| ಪೂರ್ವಾಪೇಕ್ಷಿತ ಅಂಶಗಳು | ವಸಾಹತುಶಾಹಿ ಆಡಳಿತ, ರಾಷ್ಟ್ರೀಯ ಆದಾಯ, ಆರ್ಥಿಕ ಕ್ಷೇತ್ರಗಳು ಮುಂತಾದ ಪದಗಳ ಬಗ್ಗೆ ಜ್ಞಾನ. |
| ಉದ್ದೇಶಗಳು | ವಿದ್ಯಾರ್ಥಿಗಳು ಈ ಪಾಠವನ್ನು ಓದಿ ಕಲಿತ ನಂತರ ಈ ಕೆಳಗಿನ ಅಂಶಗಳನ್ನು ಅರ್ಥಮಾಡಿಕೊಳ್ಳುತ್ತಾರೆ:<br>• ಸ್ವಾತಂತ್ರ್ಯದ ಸಮಯದಲ್ಲಿ ಭಾರತೀಯ ಆರ್ಥಿಕತೆಯ ವಿವಿಧ ಲಕ್ಷಣಗಳು.<br>• ಭಾರತೀಯ ಆರ್ಥಿಕತೆಯ ಅನಭಿವೃದ್ಧಿಗೆ ಕಾರಣವಾದ ಅಂಶಗಳನ್ನು ವಿವರಿಸುವರು. |
| ಪ್ರಮುಖ ಪದಗಳು | ಕೃಷಿಯ ವಾಣಿಜ್ಯೀಕರಣ, ಹತ್ತಿ ಮತ್ತು ಸೆಣಬಿನ ಜವಳಿ ಗಿರಣಿಗಳು, ಜನಸಂಖ್ಯಾ ಪರಿವರ್ತನೆ, ಕರಕುಶಲ ವಸ್ತುಗಳು, ಶಿಶು ಮರಣ ಪ್ರಮಾಣ, ಜೀವಿತಾವಧಿ, ಭೂ ವಸಾಹತು, ರೈಲ್ವೆ, ಟೆಲಿಗ್ರಾಫ್, ಜಮೀನ್ದಾರಿ ಪದ್ಧತಿ. |

## 2. Development Team

| Role | Name | Affiliation |
|---|---|---|
| National MOOC Coordinator (NMC) | Prof. Amarendra P. Behera | CIET, NCERT, New Delhi |
| Program Coordinator | Dr. Mohd. Mamur Ali | CIET, NCERT, New Delhi |
| Course Coordinator (CC) / PI | Prof. Neeraja Rashmi | DESS, NCERT, New Delhi |
| Subject Matter Expert (SME) | Dr. Janmejoy Khuntia | School of Open Learning, University of Delhi |
| Review Team | Dr. Meera Malhan | DCAC, University of Delhi |
| Translator | Jnana Murthy B.R. | Resource Person, National Translation Mission, Central Institute of Indian Languages, Mansagangotri, Mysuru, Karnataka |

## ಪರಿವಿಡಿ:

1. ಪರಿಚಯ
2. ಜನಸಂಖ್ಯಾ ಸ್ಥಿತಿ
3. ಔದ್ಯೋಗಿಕ ರಚನೆ
4. ಮೂಲಸೌಕರ್ಯ
5. ಕೃಷಿಯ ಸ್ಥಿತಿ
6. ಕೈಗಾರಿಕೆಗಳ ಸ್ಥಿತಿ
7. ವಿದೇಶಿ ವ್ಯಾಪಾರದ ಸ್ಥಿತಿ
8. ಉಪಸಂಹಾರ

## ಪರಿಚಯ

1947 ರಿಂದ 2017 ರ ನಡುವೆ ಸುಮಾರು ಏಳು ದಶಕಗಳ ಸ್ವಾತಂತ್ರ್ಯದ ನಂತರವೂ, ವಿಶ್ವದ ಕಡಿಮೆ ಉತ್ಪಾದನೆಯ ಆದಾಯದ ದೇಶಗಳಲ್ಲಿ ಭಾರತವನ್ನು ಇನ್ನೂ ಸಹ ಪಟ್ಟಿ ಮಾಡಲಾಗಿದೆ. ಭಾರತದ ಪ್ರಸ್ತುತ ಆರ್ಥಿಕ ಸ್ಥಿತಿಗೆ ಕಾರಣವಾದ ಪ್ರಮುಖ ಅಂಶವೆಂದರೆ ದೇಶವು ಅನುಭವಿಸಿದ ಐತಿಹಾಸಿಕ ಬೆಳವಣಿಗೆಗಳು. ಸುಮಾರು ಇನ್ನೂರು ವರ್ಷಗಳ ಆಳ್ವಿಕೆಯ ನಂತರ 1947 ರಲ್ಲಿ ಬ್ರಿಟಿಷರು ಭಾರತವನ್ನು ತೊರೆದಾಗ, ಭಾರತ ಸರ್ಕಾರವು ಆರ್ಥಿಕತೆಯನ್ನು ಆನುವಂಶಿಕವಾಗಿ ಪಡೆದುಕೊಂಡಿತು, ಅದು ಅವರ ದೃಷ್ಟಿಯ ಫಲಿತಾಂಶವಾಗಿದೆ. ಆದ್ದರಿಂದ ಬ್ರಿಟಿಷ್ ಸರ್ಕಾರದ ಅಡಿಯಲ್ಲಿ ನಡೆದ ಆರ್ಥಿಕ ಅಭಿವೃದ್ಧಿಯನ್ನು ಅಧ್ಯಯನ ಮಾಡುವುದು ಅವಶ್ಯಕ. ನಮ್ಮ ವಿಶ್ಲೇಷಣೆಯು ಸ್ವಾತಂತ್ರ್ಯದ ಸಮಯದಲ್ಲಿನ ಜನಸಂಖ್ಯಾ ಸ್ಥಿತಿ, ಔದ್ಯೋಗಿಕ ರಚನೆ ಮತ್ತು ಮೂಲಸೌಕರ್ಯ, ಕೃಷಿ ಸ್ಥಿತಿಗತಿ, ಕೈಗಾರಿಕಾ ಪರಿಸ್ಥಿತಿ ಮತ್ತು ಭಾರತದಲ್ಲಿದ್ದ ವಿದೇಶಿ ವ್ಯಾಪಾರದ ಮೇಲೆ ಕೇಂದ್ರೀಕರಿಸುತ್ತದೆ.

## ಜನಸಂಖ್ಯಾ ಸ್ಥಿತಿಗತಿ

ಆರ್ಥಿಕತೆಯು ಜನಸಂಖ್ಯಾ ಸ್ಥಿತಿಯನ್ನು ಜನಸಂಖ್ಯೆಯ ಬೆಳವಣಿಗೆ, ಸಾಕ್ಷರತೆಯ ಮಟ್ಟ, ಮರಣ ಪ್ರಮಾಣ ಮುಂತಾದ ವಿವಿಧ ಶೀರ್ಷಿಕೆಗಳ ಅಡಿಯಲ್ಲಿ ಅಧ್ಯಯನ ಮಾಡಲಾಗುತ್ತದೆ. ಭಾರತದಲ್ಲಿ ಮೊದಲ ಜನಗಣತಿಯನ್ನು 1872 ರಲ್ಲಿ ಏಕಕಾಲಿಕವಲ್ಲದ ರೀತಿಯಲ್ಲಿ ನಡೆಸಲಾಯಿತು. ಆದರೆ ಬ್ರಿಟಿಷ್ ಭಾರತದ ಜನಸಂಖ್ಯೆಯ ಬಗ್ಗೆ ವಿವಿಧ ವಿವರಗಳನ್ನು ಮೊದಲು 1881 ರಲ್ಲಿ ಜನಗಣತಿಯ ಮೂಲಕ ಸಂಗ್ರಹಿಸಲಾಯಿತು. ಕೆಲವು ಮಿತಿಗಳ ಹೊರತಾಗಿಯೂ, ಇದು ಭಾರತದ ಜನಸಂಖ್ಯಾ ಬೆಳವಣಿಗೆಯಲ್ಲಿನ ಅಸಮಾನತೆಯನ್ನು ಬಹಿರಂಗಪಡಿಸಿತು. ತರುವಾಯ, ಪ್ರತಿ ಹತ್ತು ವರ್ಷಗಳಿಗೊಮ್ಮೆ ಇಂತಹ ಜನಗಣತಿ ಕಾರ್ಯಾಚರಣೆಗಳನ್ನು ನಡೆಸಲಾಗುತ್ತಿತ್ತು.

ಜನಸಂಖ್ಯಾ ಪರಿವರ್ತನೆಯ ಸಿದ್ಧಾಂತವು ಮೂರು ಹಂತಗಳನ್ನು ಹೊಂದಿದೆ:
ಹಂತ I, ಜನನ ಪ್ರಮಾಣ ಮತ್ತು ಮರಣ ಪ್ರಮಾಣ ಎರಡೂ ಹೆಚ್ಚಾಗಿರುವಿಕೆ.
ಹಂತ II, ಜನನ ಪ್ರಮಾಣ ಹೆಚ್ಚಾಗಿದ್ದು ಮತ್ತು ಮರಣ ಪ್ರಮಾಣ ಕಡಿಮೆ ಇರುವಿಕೆ.
ಹಂತ III, ಜನನ ಪ್ರಮಾಣ ಮತ್ತು ಮರಣ ಪ್ರಮಾಣ ಎರಡೂ ಕಡಿಮೆ ಇರುವಿಕೆ.

ಇದನ್ನು ಜನಸಂಖ್ಯಾ ಪರಿವರ್ತನೆಯ ಸಿದ್ಧಾಂತಕ್ಕೆ ಹೋಲಿಸಿದರೆ, 1881-1921 ರ ನಡುವೆ ಭಾರತವು ಜನಸಂಖ್ಯಾ ಪರಿವರ್ತನೆಯ ಮೊದಲ ಹಂತದಲ್ಲಿದೆ ಎಂದು ಸುಲಭವಾಗಿ

ಪರಿಶೀಲಿಸಬಹುದು. ಈ ಅವಧಿಯಲ್ಲಿ ಜನನ ಮತ್ತು ಮರಣ ಪ್ರಮಾಣವು ತುಂಬಾ ಹೆಚ್ಚು ಮತ್ತು ಪರಸ್ಪರ ಹತ್ತಿರದಲ್ಲಿರುವುದರಿಂದ ಜನಸಂಖ್ಯೆಯ ಬೆಳವಣಿಗೆ ತೀರಾ ಕಡಿಮೆ.

ಜನಸಂಖ್ಯಾ ಪರಿವರ್ತನೆಯ ಎರಡನೇ ಹಂತವು 21 ರ ನಂತರ ಪ್ರಾರಂಭವಾಯಿತು, ಇದು ಜನಸಂಖ್ಯೆಯ ಹೆಚ್ಚಿನ ಬೆಳವಣಿಗೆಗೆ ಸಾಕ್ಷಿಯಾಯಿತು. ಎರಡನೆಯ ಹಂತವು ಹೆಚ್ಚಿನ ಜನನ ಪ್ರಮಾಣ ಮತ್ತು ಕಡಿಮೆ ಸಾವಿನ ಪ್ರಮಾಣದಿಂದ ಗುರುತಿಸಲ್ಪಟ್ಟಿದೆ, ಇದರಿಂದಾಗಿ ಜನಸಂಖ್ಯೆಯು ಬಹಳ ವೇಗವಾಗಿ ಬೆಳೆಯುತ್ತದೆ. 1921 ರ ನಡುವೆ 1951 ರಲ್ಲಿ ಸ್ವತಂತ್ರ ಭಾರತದ ಮೊದಲ ಜನಗಣತಿಯವರೆಗೆ, ಜನಸಂಖ್ಯೆಯು ಸುಮಾರು 25 ಕೋಟಿಯಿಂದ ಸುಮಾರು 36 ಕೋಟಿಗೆ ಏರಿತು. ಆದ್ದರಿಂದ, ಸ್ವಾತಂತ್ರ್ಯದ ಸಮಯದಲ್ಲಿ ಭಾರತವು ಈಗಾಗಲೇ ಭಾರೀ ಜನಸಂಖ್ಯಾ ಒತ್ತಡದ ಭೀತಿಯಲ್ಲಿತ್ತು.

ಸಾಕ್ಷರತೆ ಪ್ರಮಾಣ ಮತ್ತು ಮರಣ ಪ್ರಮಾಣಗಳಂತಹ ವಿವಿಧ ಸಾಮಾಜಿಕ ಅಭಿವೃದ್ಧಿ ಸೂಚಕಗಳು ಸಹ ಪ್ರೋತ್ಸಾಹದಾಯಕವಾಗಿರಲಿಲ್ಲ. ಒಟ್ಟಾರೆ ಸಾಕ್ಷರತೆಯ ಮಟ್ಟವು ಶೇಕಡಾ 16 ಕ್ಕಿಂತ ಕಡಿಮೆಯಿತ್ತು. ಇದರಲ್ಲಿ, ಸ್ತ್ರೀ ಸಾಕ್ಷರತೆಯ ಮಟ್ಟವು ಶೇಕಡಾ ಏಳು ರಷ್ಟಿದೆ. ಒಟ್ಟಾರೆ ಮರಣ ಪ್ರಮಾಣವು ತುಂಬಾ ಹೆಚ್ಚಿತ್ತು ಮತ್ತು ಅದರಲ್ಲೂ ನಿರ್ದಿಷ್ಟವಾಗಿ, ಶಿಶು ಮರಣ ಪ್ರಮಾಣವು ಸಾಕಷ್ಟು ಆತಂಕಕಾರಿಯಾಗಿತ್ತು – ಪ್ರತಿ ಸಾವಿರಕ್ಕೆ 218 ರಷ್ಟಕ್ಕೆ ಇದ್ದದ್ದು 2016 ರಲ್ಲಿ ಶಿಶುಗಳ ಮರಣ ಪ್ರಮಾಣವು ಪ್ರತಿ ಸಾವಿರಕ್ಕೆ 41 ರಷ್ಟಕ್ಕೆ ವ್ಯತಿರಿಕ್ತವಾಗಿದೆ. ಜೀವಿತಾವಧಿ ಕೂಡ ತುಂಬಾ ಕಡಿಮೆಯಿತ್ತು- 32 ವರ್ಷಗಳು. ಇದಕ್ಕೆ ವಿರುದ್ಧವಾಗಿ 2016 ರ ಹೊತ್ತಿಗೆ ಸುಮಾರು 69 ವರ್ಷಗಳು. ಸಾರ್ವಜನಿಕ ಆರೋಗ್ಯ ಸೌಲಭ್ಯಗಳು ಸಂಪೂರ್ಣವಾಗಿ ಅಸಮರ್ಪಕವಾಗಿದ್ದಿತು ಎಂದು ಇದು ಸೂಚಿಸುತ್ತದೆ. ಇದರ ಪರಿಣಾಮವಾಗಿ, ನೀರು ಮತ್ತು ವಾಯುಗಾಮಿ ರೋಗಗಳು ವಿಪರೀತವಾಗಿದ್ದವು ಮತ್ತು ಜೀವನದ ಮೇಲೆ ಭಾರಿ ನಷ್ಟವನ್ನುಂಟುಮಾಡಿತು.

## ಔದ್ಯೋಗಿಕ ರಚನೆ

ಔದ್ಯೋಗಿಕ ರಚನೆಯು ವಿವಿಧ ಕೈಗಾರಿಕೆಗಳು ಮತ್ತು ಕ್ಷೇತ್ರಗಳಲ್ಲಿ ಕೆಲಸ ಮಾಡುವ ವ್ಯಕ್ತಿಗಳ ವಿತರಣೆಯನ್ನು ಸೂಚಿಸುತ್ತದೆ. ಇದು ಬ್ರಿಟಿಷ್ ಆಳ್ವಿಕೆಯಲ್ಲಿ ಬದಲಾವಣೆಯು ಕಡಿಮೆ ಚಿಹ್ನೆಯನ್ನು ತೋರಿಸಿತು. ಕೃಷಿ ಕ್ಷೇತ್ರವು ಉದ್ಯೋಗಿಗಳ ಅತಿದೊಡ್ಡ ಪಾಲನ್ನು ಹೊಂದಿದೆ, ಇದು ಸಾಮಾನ್ಯವಾಗಿ ಶೇಕಡಾ 70-75 ರಷ್ಟು ಉನ್ನತ ಮಟ್ಟದಲ್ಲಿ ಉಳಿಯುತ್ತದೆ ಮತ್ತು ಸೇವಾ ಕ್ಷೇತ್ರಗಳು ಕ್ರಮವಾಗಿ 10 ಮತ್ತು 15-20 ರಷ್ಟನ್ನು ಮಾತ್ರ ಹೊಂದಿವೆ. ವಿವಿಧ ಅಭಿವೃದ್ಧಿ ಹೊಂದಿದ ಆರ್ಥಿಕತೆಗಳಲ್ಲಿ ಹೆಚ್ಚಿನ ಆರ್ಥಿಕ ಅಭಿವೃದ್ಧಿಯ ಮಟ್ಟವು ಕೃಷಿ ಕ್ಷೇತ್ರದಿಂದ ಕೈಗಾರಿಕಾ ಮತ್ತು ಸೇವಾ ಕ್ಷೇತ್ರಗಳಿಗೆ ಕಾಲಾನಂತರದಲ್ಲಿ ಬದಲಾಗುವ ಶೇಕಡಾವಾರು ಪ್ರಮಾಣವನ್ನು ಹೆಚ್ಚಿಸುತ್ತದೆ ಎಂದು ಗಮನಿಸಲಾಗಿದೆ. ಎರಡು ಶತಮಾನಗಳ ಬ್ರಿಟಿಷ್ ಆಳ್ವಿಕೆಯಲ್ಲಿ ಭಾರತದ ಔದ್ಯೋಗಿಕ ಅರ್ಥಿಕ ರಚನೆಯಲ್ಲಿನ ಈ ಪ್ರವೃತ್ತಿ ಕಾಣೆಯಾಗಿದೆ, ಇದು ಸ್ವಾತಂತ್ರ್ಯದ ಸಮಯದಲ್ಲಿ ಭಾರತವು ಕೃಷಿ ಆರ್ಥಿಕತೆಯಾಗಿ ಉಳಿದಿದೆ ಎಂದು ಸೂಚಿಸುತ್ತದೆ. ಇದಕ್ಕೆ ಎರಡು ಪ್ರಮುಖ ಅಂಶಗಳು ಜವಾಬ್ದಾರಿಯಾಗಿವೆ. ಒಂದು, ಬ್ರಿಟಿಷರ ಆಕ್ರಮಣಕ್ಕೆ ಮುಂಚಿತವಾಗಿ, ಮೊಘಲ್ ಸಾಮ್ರಾಜ್ಯ ಮತ್ತು ಸ್ಥಳೀಯ ರಾಜರು ಮತ್ತು ಆಡಳಿತಗಾರರ ಅಡಿಯಲ್ಲಿ ಭಾರತೀಯ ಕರಕುಶಲ ಕೈಗಾರಿಕೆಗಳು ಪ್ರವರ್ಧಮಾನಕ್ಕೆ ಬಂದವು. ಬ್ರಿಟಿಷರು ದೇಶವನ್ನು ಆಕ್ರಮಿಸಿದಾಗ, ಅವರು ಮೊಘಲ್ ಸಾಮ್ರಾಜ್ಯವನ್ನು ಮೀರಿಸಿದರು ಮತ್ತು ಸ್ಥಳೀಯ ರಾಜರು ಅಥವಾ ಆಡಳಿತಗಾರರನ್ನು ಸೋಲಿಸಿದರು, ಹೀಗಾಗಿ ಕರಕುಶಲ ಕೈಗಾರಿಕೆಗಳನ್ನು ನಾಶಪಡಿಸಿದರು. ಇದರ ಪರಿಣಾಮವಾಗಿ, ಈ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಗ್ರಾಮೀಣ ಪ್ರದೇಶಗಳತ್ತ ಸಾಗಲು ಮತ್ತು ಕೃಷಿಯನ್ನು ತಮ್ಮ ಮುಖ್ಯ ಜೀವನೋಪಾಯವಾಗಿ ಅಳವಡಿಸಿಕೊಳ್ಳಲು ಒತ್ತಾಯಿಸಲಾಯಿತು. ಎರಡನೆಯದಾಗಿ,

ಭಾರತದಲ್ಲಿ ಬ್ರಿಟಿಷ್ ಆಡಳಿತವು ಇಂಗ್ಲೆಂಡ್‌ನಲ್ಲಿ ನಡೆಯುತ್ತಿರುವ ಕೈಗಾರಿಕೆಗಳಿಗೆ ಅಗತ್ಯವಾದ ಕಚ್ಚಾ ವಸ್ತುಗಳನ್ನು ಪೂರೈಸಲು ರೈತರಿಗೆ ಹಣವನ್ನು ಪಾವತಿಸುವ ಮೂಲಕ ಕೃಷಿಯಲ್ಲಿ ಕೆಲಸ ಮಾಡಲು ಜನರನ್ನು ಪ್ರೋತ್ಸಾಹಿಸಿತು. ಆದ್ದರಿಂದ ಕೃಷಿ ಭಾರತದಲ್ಲಿ ಪ್ರಮುಖ ಉದ್ಯೋಗವಾಗಿ ಉಳಿಯಿತು.

ಕಾರ್ಯನಿರತ ತಂಡದ ವಿತರಣೆಯಲ್ಲಿ ಗಮನಾರ್ಹವಾದ ಪ್ರಾದೇಶಿಕ ವ್ಯತ್ಯಾಸವೂ ಕಂಡುಬಂದಿದೆ. ಮಹಾರಾಷ್ಟ್ರ, ಪಶ್ಚಿಮ ಬಂಗಾಳ ಮತ್ತು ಇಂದಿನ ರಾಜ್ಯಗಳಾದ ತಮಿಳುನಾಡು, ಆಂಧ್ರಪ್ರದೇಶ, ಕೇರಳ ಮತ್ತು ಕರ್ನಾಟಕದ ಪ್ರದೇಶಗಳನ್ನು ಒಳಗೊಂಡ ಅಂದಿನ ಮದ್ರಾಸ್ ಪ್ರೆಸಿಡೆನ್ಸಿಯ ಕೆಲವು ಭಾಗಗಳು ಕೃಷಿ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದ ಉದ್ಯೋಗಿಗಳ ಶೇಕಡಾವಾರು ಕುಸಿತಕ್ಕೆ ಸಾಕ್ಷಿಯಾಗಿದೆ ಮತ್ತು ಅದೇ ವೇಳೆ ಉತ್ಪಾದನೆ ಮತ್ತು ಸೇವಾ ಕ್ಷೇತ್ರಗಳಲ್ಲಿನ ಉದ್ಯೋಗಗಳ ಹೆಚ್ಚಳಕ್ಕೆ ಸಾಕ್ಷಿಯಾಗಿದೆ. ಮತ್ತೊಂದೆಡೆ, ಅದೇ ಸಮಯದಲ್ಲಿ ಒರಿಸ್ಸಾ, ರಾಜಸ್ಥಾನ ಮತ್ತು ಪಂಜಾಬ್‌ನಂತಹ ಇತರ ರಾಜ್ಯಗಳಲ್ಲಿ ಕೃಷಿನಿರತ ಉದ್ಯೋಗಿಗಳ ಹೆಚ್ಚಳಕ್ಕೆ ಸಾಕ್ಷಿಯಾಗಿದೆ.

## ಮೂಲಸೌಕರ್ಯ

ಬ್ರಿಟಿಷ್ ಆಡಳಿತದ ಒಂದು ಸಕಾರಾತ್ಮಕ ಅಂಶವೆಂದರೆ ರೈಲ್ವೆ, ಬಂದರುಗಳು, ಜಲ ಸಾರಿಗೆ, ಪೋಸ್ಟ್‌ಗಳು ಮತ್ತು ಟೆಲಿಗ್ರಾಫ್‌ಗಳಂತಹ ಮೂಲಸೌಕರ್ಯಗಳ ರಚನೆಯಾಗಿದೆ. ವಾಸ್ತವವಾಗಿ 1850 ರಲ್ಲಿ ಭಾರತದಲ್ಲಿ ರೈಲು ಸಾರಿಗೆಯ ಪರಿಚಯವು ಅವರ ಪ್ರಮುಖ ಕೊಡುಗೆಗಳಲ್ಲಿ ಒಂದಾಗಿದೆ. ರಾಷ್ಟ್ರೀಯ ಏಕೀಕರಣದಲ್ಲಿ ರೈಲು ಸಾರಿಗೆಯು ಪ್ರಮುಖ ಪಾತ್ರ ವಹಿಸಿದೆ ಏಕೆಂದರೆ ಇದು ಭಾರತದ ಜನರಿಗೆ ದೂರದ ಪ್ರಯಾಣವನ್ನು ಕೈಗೊಳ್ಳಲು ಮತ್ತು ಆ ಮೂಲಕ ಭೌಗೋಳಿಕ ಮತ್ತು ಸಾಂಸ್ಕೃತಿಕ ಅಡೆತಡೆಗಳನ್ನು ತೊಡೆದುಹಾಕಲು ಸಾಧ್ಯವಾಗಿಸಿತು.

ಆದಾಗ್ಯೂ, ಈ ಅಭಿವೃದ್ಧಿಯ ಹಿಂದಿನ ನಿಜವಾದ ಉದ್ದೇಶವೆಂದರೆ ವಿವಿಧ ವಸಾಹತುಶಾಹಿ ಹಿತಾಸಕ್ತಿಗಳನ್ನು ಈ ಕೆಳಗಿನ ವಿಧಾನಗಳಲ್ಲಿ ಪೂರೈಸುವುದಾಗಿತ್ತು.

1. ಕಚ್ಚಾ ವಸ್ತುಗಳನ್ನು ಗ್ರಾಮಾಂತರದಿಂದ ಹತ್ತಿರದ ಬಂದರಿಗೆ ಮತ್ತು ಅಲ್ಲಿಂದ ಇಂಗ್ಲೆಂಡ್‌ಗೆ ಸಾಗಿಸಲು ರೈಲ್ವೆ ಮತ್ತು ರಸ್ತೆಗಳು ಬೇಕಾಗಿದ್ದವು. ಈ ಕಚ್ಚಾ ವಸ್ತುಗಳು, ಇಂಗ್ಲೆಂಡ್‌ಗೆ ತಲುಪಿದ ನಂತರ, ಅಲ್ಲಿನ ಕೈಗಾರಿಕೆಗಳಲ್ಲಿ ಸಂಸ್ಕರಿಸಿದ ವಸ್ತುಗಳನ್ನು ತಯಾರಿಸಲು ಬಳಸಲಾಗುತ್ತದೆ. ಈ ಸರಕುಗಳನ್ನು ನಂತರ ಭಾರತ ಮತ್ತು ಇತರ ಬ್ರಿಟಿಷ್ ವಸಾಹತುಗಳು ಮತ್ತು ದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು. ಸಿದ್ಧಪಡಿಸಿದ ಸರಕುಗಳು ಭಾರತದ ಬಂದರುಗಳನ್ನು ತಲುಪಿದ ನಂತರ, ಇವುಗಳನ್ನು ರಸ್ತೆ ಮತ್ತು ರೈಲ್ವೆ ಜಾಲದಿಂದ ದೇಶದ ವಿವಿಧ ಭಾಗಗಳಿಗೆ ಸಾಗಿಸಿ ಭಾರತೀಯ ಗ್ರಾಹಕರಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡಲಾಗುತ್ತಿತ್ತು. ಭಾರತವು ಬ್ರಿಟಿಷ್ ಸರಕುಗಳಿಗೆ ದೊಡ್ಡ ಮಾರುಕಟ್ಟೆಯಾಯಿತು. ಆದ್ದರಿಂದ ಕಚ್ಚಾ ವಸ್ತುಗಳ ಪೂರೈಕೆದಾರರಾಗಿ ಮತ್ತು ಬ್ರಿಟಿಷ್ ಸರಕುಗಳ ಗ್ರಾಹಕರಾಗಿ, ಭಾರತವನ್ನು "ಫೀಡರ್ ಆರ್ಥಿಕತೆ" ಎಂದು ಕರೆಯಲಾಯಿತು.

2. ನಿಮಗೆ ತಿಳಿದಿರುವಂತೆ ಬ್ರಿಟಿಷರು ಯುದ್ಧಗಳನ್ನು ನಡೆಸಲು ಇತರ ದೇಶಗಳನ್ನೂ ವಸಾಹತುವನ್ನಾಗಿ ಮಾಡಿದರು. ಅದಕ್ಕಾಗಿ ಅವರು ಯಾವಾಗಲೂ ಯುದ್ಧಗಳನ್ನು ಎದುರಿಸಲು ತಮ್ಮ ಸೈನ್ಯವನ್ನು ನಿರ್ಮಿಸಲು ಜನರನ್ನು ನೇಮಿಸಿಕೊಳ್ಳುತ್ತಿದ್ದರು. ಆದ್ದರಿಂದ ಭಾರತದೊಳಗೆ ಸೈನ್ಯವನ್ನು ಸಜ್ಜುಗೊಳಿಸಲು ರಸ್ತೆ ಮತ್ತು ರೈಲ್ವೆ ಸಾರಿಗೆ ಜಾಲವನ್ನು ನಿರ್ಮಿಸುವುದು ಅವರಿಗೆ ಅಗತ್ಯವಾಗಿತ್ತು.

3. ಸಿದ್ಧಪಡಿಸಿದ ಸರಕುಗಳು ಮತ್ತು ಇತರ ವಸ್ತುಗಳನ್ನು ಬಂದರಿಗೆ ಸಾಗಿಸಲು ರಸ್ತೆ ಮತ್ತು ರೈಲ್ವೆ ಜಾಲವನ್ನು ಸಹ ಬಳಸಲಾಗುತ್ತಿತ್ತು, ಅಲ್ಲಿಂದ ಇವುಗಳನ್ನು ಇತರ ವಸಾಹತುಗಳು ಮತ್ತು ದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು. ಈ ರೀತಿಯಾಗಿ ಬ್ರಿಟಿಷ್ ಆಡಳಿತವು ಸಾಕಷ್ಟು ವಿದೇಶಿ ವಿನಿಮಯವನ್ನು ಗಳಿಸಿತು.

4. ಬ್ರಿಟಿಷ್ ಆಳ್ವಿಕೆಯಲ್ಲಿ ಯಾವುದೇ ಮೂಲಸೌಕರ್ಯಗಳನ್ನು ರಚಿಸಲಾಗಿದ್ದರೂ, ಅಂತಹ ಸೌಲಭ್ಯಗಳು ಅಸಮರ್ಪಕ ಮತ್ತು ಸೀಮಿತವಾಗಿರುವುದರಿಂದ ಭಾರತವು ಈ ಸೌಲಭ್ಯಗಳಿಂದ ಹೆಚ್ಚಿನ ಪ್ರಯೋಜನವನ್ನು ಪಡೆಯಲಿಲ್ಲ. ಗ್ರಾಮೀಣ ಪ್ರದೇಶಗಳಿಗೆ, ವಿಶೇಷವಾಗಿ ಮಳೆಗಾಲದಲ್ಲಿ ತಲುಪಲು ಯಾವಾಗಲೂ ಎಲ್ಲಾ ಹವಾಮಾನಗಳಿಗೂ ಒಗ್ಗುವಂತಹ ರಸ್ತೆಗಳ ತೀವ್ರ ಕೊರತೆಯಿದೆ ಎಂಬುದು ಸ್ಪಷ್ಟವಾಗಿದೆ. ಹೆಚ್ಚಿನ ಗ್ರಾಮೀಣ ಭಾರತದ ಮುಖ್ಯ ಪ್ರವಾಹದಿಂದ ಕತ್ತರಿಸಲ್ಪಟ್ಟಿತು. ಆದ್ದರಿಂದ, ಸ್ವಾಭಾವಿಕವಾಗಿ, ಈ ಪ್ರದೇಶಗಳಲ್ಲಿ ವಾಸಿಸುವ ಜನರು ನೈಸರ್ಗಿಕ ವಿಪತ್ತುಗಳು ಮತ್ತು ಬರಗಾಲದ ಸಮಯದಲ್ಲಿ ತೀವ್ರವಾಗಿ ಬಳಲುತ್ತಿದ್ದರು, ಇದು ಬ್ರಿಟಿಷ್ ಅವಧಿಯಲ್ಲಿ ಆಗಾಗ್ಗೆ ಸಂಭವಿಸುತ್ತಿತ್ತು. ರೈಲ್ವೆಗಳ ಪರಿಚಯದಿಂದಾಗಿ ಭಾರತೀಯ ಜನರು ಗಳಿಸಿದ ಸಾಮಾಜಿಕ ಲಾಭಗಳು ದೇಶದ ಭಾರಿ ಆರ್ಥಿಕ ನಷ್ಟದಿಂದ ಹೊರೆಯಾಗಿ ಪರಿಣಮಿಸಿದೆ.

ರಸ್ತೆಗಳು ಮತ್ತು ರೈಲ್ವೆಗಳಲ್ಲದೆ, ವಸಾಹತುಶಾಹಿ ವಿತರಣೆಯು ಒಳನಾಡಿನ ವ್ಯಾಪಾರ ಮತ್ತು ಸಮುದ್ರ ಪಥಗಳನ್ನು ಅಭಿವೃದ್ಧಿಪಡಿಸಲು ಕ್ರಮಗಳನ್ನು ತೆಗೆದುಕೊಂಡಿತು. ಆದಾಗ್ಯೂ, ಈ ಕ್ರಮಗಳು ತೃಪ್ತಿಕರವಾಗಿರಲಿಲ್ಲ. ಒಳನಾಡಿನ ಜಲಮಾರ್ಗಗಳು ಕೆಲವೊಮ್ಮೆ ಆರ್ಥಿಕರಹಿತವೆಂದು ಸಾಬೀತಾಯಿತು. ಉದಾಹರಣೆಗೆ, ಒರಿಸ್ಸಾ ಕರಾವಳಿಯ ಕರಾವಳಿ ಕಾಲುವೆಯ ವಿಷಯವನ್ನು ತೆಗೆದುಕೊಳ್ಳಿ. ಕಾಲುವೆಯನ್ನು ಸರ್ಕಾರದ ಬೊಕ್ಕಸಕ್ಕೆ ಭಾರಿ ವೆಚ್ಚದಲ್ಲಿ ನಿರ್ಮಿಸಲಾಗಿದ್ದರೂ, ಅದರ ಬಳಕೆ ಬಹಳ ಸೀಮಿತ ಅಥವಾ ಅಸ್ತಿತ್ವದಲ್ಲಿಲ್ಲ. ಮುಖ್ಯ ಕಾರಣವೆಂದರೆ ಅದು ರೈಲ್ವೆಯೊಂದಿಗೆ ಸ್ಪರ್ಧಿಸಲು ವಿಫಲವಾಗಿದೆ, ಇದು ಶೀಘ್ರದಲ್ಲೇ ಕಾಲುವೆಗೆ ಸಮಾನಾಂತರವಾಗಿ ಚಲಿಸುವ ಪ್ರದೇಶವನ್ನು ಹಾದುಹೋಯಿತು. ಆದ್ದರಿಂದ ಯೋಜನೆಯನ್ನು ಅಂತಿಮವಾಗಿ ಕೈಬಿಡಲಾಯಿತು.

ಭಾರತದಲ್ಲಿ ಬ್ರಿಟಿಷರು ಕೈಗೊಂಡ ಮೂಲಸೌಕರ್ಯ ರಚನೆಯಲ್ಲಿ ಮತ್ತೊಂದು ಪ್ರಮುಖ ಬೆಳವಣಿಗೆಯೆಂದರೆ ಟೆಲಿಗ್ರಾಫ್ ಪರಿಚಯದ ಮೂಲಕ ದೂರಸಂಪರ್ಕ ವ್ಯವಸ್ಥೆಯನ್ನು ಸ್ಥಾಪಿಸುವುದಾಗಿದ್ದಿತು. 1850 ರಲ್ಲಿ, ಕಲ್ಕತ್ತಾ (ಈಗ ಕೋಲ್ಕತಾ) ಮತ್ತು ಡೈಮಂಡ್ ಹಾರ್ಬರ್ ನಡುವೆ ಮೊದಲ ಪ್ರಾಯೋಗಿಕ ವಿದ್ಯುತ್ ಟೆಲಿಗ್ರಾಫ್ ಮಾರ್ಗವನ್ನು ಪ್ರಾರಂಭಿಸಲಾಯಿತು. 1851 ರಲ್ಲಿ ಇದನ್ನು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಬಳಕೆಗಾಗಿ ತೆರೆಯಲಾಯಿತು. 1853 ರಲ್ಲಿ ಭಾರತದ ಕೆಲವು ಭಾಗಗಳನ್ನು ಟೆಲಿಗ್ರಾಫ್ ಮಾರ್ಗಗಳ ಮೂಲಕ ಸಂಪರ್ಕಿಸಲಾಯಿತು, ಇದರಲ್ಲಿ ಕೋಲ್ಕತಾ (ಆಗಿನ ಕಲ್ಕತ್ತಾ) ಮತ್ತು ಪೇಶಾವರ್, ಆಗ್ರಾ, ಮುಂಬೈ (ಆಗ ಬಾಂಬೆ) ಮತ್ತು ಚೆನ್ನೈ (ಆಗ ಮದ್ರಾಸ್) ಸೇರಿವೆ. 1854 ರಲ್ಲಿ ಸಾರ್ವಜನಿಕರಿಗೆ ಟೆಲಿಗ್ರಾಫ್ ಸೌಲಭ್ಯ ಒದಗಿಸಲು ಪ್ರತ್ಯೇಕ ಇಲಾಖೆಯನ್ನು ತೆರೆಯಲಾಯಿತು. ಕಲ್ಕತ್ತಾ, ಬಾಂಬೆ, ಮದ್ರಾಸ್ ಮತ್ತು ಅಹಮದಾಬಾದ್‌ನಲ್ಲಿ ದೂರವಾಣಿ ವಿನಿಮಯ ಕೇಂದ್ರಗಳನ್ನು ಸ್ಥಾಪಿಸಲು 1881 ರಲ್ಲಿ ಇಂಗ್ಲೆಂಡ್‌ನ ಒರಿಯಂಟಲ್ ಟೆಲಿಫೋನ್ ಕಂಪನಿ ಲಿಮಿಟೆಡ್‌ಗೆ ಸರ್ಕಾರವು ಪರವಾನಗಿ ನೀಡಿದಾಗ ಮೊದಲ ಔಪಚಾರಿಕ ದೂರವಾಣಿ ಸೇವೆಯನ್ನು ದೇಶದಲ್ಲಿ ಸ್ಥಾಪಿಸಲಾಯಿತು. ಎಲೆಕ್ಟ್ರಿಕ್ ಟೆಲಿಗ್ರಾಫ್ ಸೇವೆಯು ಒಂದು ಪ್ರಮುಖ ಬೆಳವಣಿಗೆಯಾಗಿದ್ದರೂ, ಇದನ್ನು ಹೆಚ್ಚಾಗಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಬಳಸಲಾಗುತ್ತಿತ್ತು. ವಾಸ್ತವವಾಗಿ, ಟೆಲಿಗ್ರಾಫ್ ಮತ್ತು ಅಂಚೆ ಸೇವೆಗಳು, ಉಪಯುಕ್ತ ಸಾರ್ವಜನಿಕ ಉದ್ದೇಶವನ್ನು ಪೂರೈಸಿದರೂ ಸಹ, ಅಸಮರ್ಪಕವಾಗಿಯೇ ಉಳಿದಿವೆ.

## ಕೃಷಿಯ ಸ್ಥಿತಿ

ಬ್ರಿಟಿಷರು ಭಾರತಕ್ಕೆ ಬರುವ ಮೊದಲು ದೇಶದ ಕೃಷಿ ಪರಿಸ್ಥಿತಿ ಬಹಳ ತೃಪ್ತಿಕರವಾಗಿತ್ತು. ಫ್ರೆಂಚ್ ಪ್ರವಾಸಿ ಬರ್ನಿಯರ್ ಅವರ ಪ್ರಕಾರ, ಬಂಗಾಳದಲ್ಲಿ ಸಂಚರಣೆ ಮತ್ತು ನೀರಾವರಿಗಾಗಿ ಗಂಗಾ ನದಿಯಿಂದ ಹೊರಹೊಮ್ಮುವ ಅಂತ್ಯವಿಲ್ಲದ ಕಾಲುವೆಗಳು ಕಂಡುಬಂದಿದ್ದವು, ಅವುಗಳಿಂದ ಸ್ವಂತ ಬಳಕೆಗಾಗಿ ಸಾಕಷ್ಟು ಪ್ರಮಾಣದಲ್ಲಿ ಗೋಧಿ, ತರಕಾರಿಗಳು, ಧಾನ್ಯಗಳು, ಕೋಳಿಗಳು, ಬಾತುಕೋಳಿಗಳು ಮತ್ತು ಹೆಬ್ಬಾತುಗಳನ್ನು ಉತ್ಪಾದಿಸಲಾಗುತ್ತಿತ್ತು. ಇದು ಹೇರಳವಾಗಿ, ಕಾಟನ್ ಮತ್ತು ರೇಷ್ಮೆ, ಅಕ್ಕಿ, ಸಕ್ಕರೆ ಮತ್ತು ಬೆಣ್ಣೆಯನ್ನು ರಫ್ತು ಮಾಡಿದೆ. ಇದು ಅಪಾರವಾದ ಹಂದಿಗಳ ಹಿಂಡುಗಳು, ಕುರಿ ಮತ್ತು ಮೇಕೆಗಳ ಹಿಂಡುಗಳು ಮತ್ತು ಪ್ರತಿಯೊಂದು ರೀತಿಯ ಮೀನುಗಳನ್ನು ಹೊಂದಿತ್ತು. ಬರ್ನಿಯರ್ ಪ್ರಕಾರ, ಬಂಗಾಳವು ಆಗ ಈಜಿಪ್ಟಿಗಿಂತಲೂ ಶ್ರೀಮಂತವಾಗಿತ್ತು.

ಆದಾಗ್ಯೂ, ಇದಕ್ಕೆ ವಿರುದ್ಧವಾಗಿ ಬ್ರಿಟಿಷ್ ಆಳ್ವಿಕೆಯಲ್ಲಿ ಭಾರತೀಯ ಕೃಷಿಯು ನಿಶ್ಚಲತೆಯಿಂದ ಬಳಲಿತು. ಸಾಗುವಳಿ ಪ್ರದೇಶದ ವಿಸ್ತರಣೆಯಿಂದಾಗಿ ಉತ್ಪಾದನೆಯಲ್ಲಿ ಸ್ವಲ್ಪ ಸುಧಾರಣೆ ಇದ್ದರೂ, ಕೃಷಿ ಕ್ಷೇತ್ರದಲ್ಲಿ ಉತ್ಪಾದಕತೆ ಕಡಿಮೆ ಇತ್ತು. ಅನೇಕ ಅಂಶಗಳು ಇದಕ್ಕೆ ಕಾರಣವಾಗಿವೆ. ಒಂದು, ನಗರ ಪ್ರದೇಶಗಳಲ್ಲಿನ ಕರಕುಶಲ ಕೈಗಾರಿಕೆಗಳ ನಾಶವು ಗ್ರಾಮೀಣ ಪ್ರದೇಶಗಳಲ್ಲಿ ನೆಲೆಸಲು ಮತ್ತು ಕೃಷಿಯನ್ನು ಪ್ರಮುಖ ಉದ್ಯೋಗವಾಗಿ ಅಳವಡಿಸಿಕೊಳ್ಳಲು ಜನರನ್ನು ಒತ್ತಾಯಿಸಿತು. ಎರಡು, ಇಂಗ್ಲೆಂಡ್‌ನ ಕೈಗಾರಿಕೆಗಳಿಗೆ ಇಂಡಿಗೊ, ಹತ್ತಿ ಮುಂತಾದ ಕಚ್ಚಾ ಸಾಮಗ್ರಿಗಳು ಬೇಕಾಗಿದ್ದವು. ಇದಕ್ಕಾಗಿ ಬ್ರಿಟಿಷ್ ಏಜೆಂಟರು ಈ ಕಚ್ಚಾ ವಸ್ತುಗಳನ್ನು ರೈತರಿಂದ ಹಣವನ್ನು ಪಾವತಿಸಿ ಖರೀದಿಸುತ್ತಿದ್ದರು. ಆದ್ದರಿಂದ, ಹಣದಿಂದ ಆಕರ್ಷಿತರಾದ ರೈತರು ಆಹಾರ ಧಾನ್ಯಗಳ ಉತ್ಪಾದನೆಯಿಂದ ಸಂಪನ್ಮೂಲಗಳನ್ನು ವರ್ಗಾಯಿಸುವ ಮೂಲಕ ಈ ಬೆಳೆಗಳನ್ನು ಬೆಳೆಸಲು ಪ್ರಾರಂಭಿಸಿದರು. 'ನಗದಿಗಾಗಿ ಬೆಳೆಯುವ ಈ ಬೆಳವಣಿಗೆಯನ್ನು "ಭಾರತೀಯ ಕೃಷಿಯ ವಾಣಿಜ್ಯೀಕರಣ" ಎಂದು ಕರೆಯಲಾಗುತ್ತದೆ. ಮೂರು, ಈ ಎರಡೂ ಅಂಶಗಳು ಕೃಷಿಯ ಮೇಲೆ ಭಾರೀ ಜನಸಂಖ್ಯೆಯ ಒತ್ತಡವನ್ನು ಸೃಷ್ಟಿಸಿದ್ದು, ಈ ವಲಯವನ್ನು ಅವಲಂಬಿಸಿ ಶೇಕಡಾ 85 ರಷ್ಟು ಜನಸಂಖ್ಯೆ ಇದೆ. ಸ್ವಾತಂತ್ರ್ಯದ ಸಮಯದಲ್ಲಿ ಈ ಅಂಕಿ-ಅಂಶವು ಸುಮಾರು 75 ಪ್ರತಿಶತದಷ್ಟಿತ್ತು, ಅದು ಇನ್ನೂ ಹೆಚ್ಚಿನ ಮಟ್ಟದಲ್ಲಿದೆ. ಭಾರಿ ಜನಸಂಖ್ಯೆಯ ಒತ್ತಡವು ದೊಡ್ಡ ಪ್ರಮಾಣದ ನಿರುದ್ಯೋಗಕ್ಕೂ ಕಾರಣವಾಗಿದೆ. ನಾಲ್ಕು, ವಸಾಹತುಶಾಹಿ ಸರ್ಕಾರವು ಭೂ ಆದಾಯವನ್ನು ಸಂಗ್ರಹಿಸಲು ಬಂಗಾಳ ಅಧ್ಯಕ್ಷತೆಯಲ್ಲಿ ಜಮೀನ್ದಾರಿ ಭೂ ವಸಾಹತು ವ್ಯವಸ್ಥೆಯನ್ನು ಪರಿಚಯಿಸಿತು. ದೇಶದ ಇತರ ಭಾಗಗಳಲ್ಲಿ ಇದೇ ರೀತಿಯ ಇತರ ವಸಾಹತುಗಳನ್ನು ಸಹ ಪರಿಚಯಿಸಲಾಯಿತು. ಈ ಜಮೀನ್ದಾರರಿಗೆ ನಿಗದಿತ ಪ್ರಮಾಣದ ಆದಾಯವನ್ನು ಸಂಗ್ರಹಿಸಿ ಠೇವಣಿ ಇಡಲು ಕೇಳಲಾಯಿತು, ಅದರಿಂದ ಅವರು ತಮ್ಮ ಸ್ಥಾನಮಾನವನ್ನು ಕಳೆದುಕೊಳ್ಳುವ ಭೀತಿಯಿತ್ತು.

ಆದ್ದರಿಂದ, ಜಮೀನ್ದಾರರು ಬಡ ರೈತರ ಅಭಿವೃದ್ಧಿಗೆ ಶ್ರಮಿಸುವುದಕ್ಕಿಂತ ಹೆಚ್ಚಾಗಿ ಆದಾಯವನ್ನು ಸಂಗ್ರಹಿಸುವ ಗುರಿಯನ್ನು ಪೂರೈಸಲು ಬಲವನ್ನು ಬಳಸುವುದು ಸೇರಿದಂತೆ ತಮ್ಮ ಎಲ್ಲಾ ಪ್ರಯತ್ನಗಳನ್ನು ಮಾಡಲು ಉಪಕ್ರಮಿಸಿದರು. ಐದು, ಕಡಿಮೆ ಮಟ್ಟದ ತಂತ್ರಜ್ಞಾನ, ನೀರಾವರಿ ಸೌಲಭ್ಯಗಳ ಕೊರತೆ ಮತ್ತು ರಸಗೊಬ್ಬರಗಳ ನಗಣ್ಯ ಬಳಕೆ, ಇವೆಲ್ಲವೂ ರೈತರ ದುಃಸ್ಥಿತಿಯನ್ನು ಉಲ್ಬಣಗೊಳಿಸುತ್ತವೆ ಮತ್ತು ಕಡಿಮೆ ಮಟ್ಟದ ಕೃಷಿ ಉತ್ಪಾದಕತೆಗೆ ಕಾರಣವಾಗಿವೆ. ಆರು, ಅವಿಭಜಿತ ದೇಶದ ಹೆಚ್ಚು ನೀರಾವರಿ ಮತ್ತು ಫಲವತ್ತಾದ ಭೂಮಿಯ ಒಂದು ಗಮನಾರ್ಹ ಭಾಗ ಪಾಕಿಸ್ತಾನಕ್ಕೆ ಹೋಯಿತು. ವಿಶ್ವ ಮಾರುಕಟ್ಟೆಯಲ್ಲಿ ಏಕಸ್ವಾಮ್ಯವನ್ನು ಅನುಭವಿಸುತ್ತಿದ್ದ ಭಾರತದ ಸೆಣಬಿನ ಉದ್ಯಮವು ಇಡೀ ಸೆಣಬನ್ನು ಉತ್ಪಾದಿಸುವ ಪ್ರದೇಶವು ಪೂರ್ವ ಪಾಕಿಸ್ತಾನದ (ಈಗ ಬಾಂಗ್ಲಾದೇಶ) ಭಾಗವಾದಾಗಿನಿಂದಲೂ ಸಹ ಅನುಭವಿಸಿತು.

## ಕೈಗಾರಿಕಗಳ ಸ್ಥಿತಿ

ಹತ್ತೊಂಬತ್ತನೇ ಶತಮಾನದ ದ್ವಿತೀಯಾರ್ಧದಲ್ಲಿ ಕೆಲವು ಆಧುನಿಕ ಕೈಗಾರಿಕೆಗಳು ಬ್ರಿಟಿಷ್ ಆಳ್ವಿಕೆಯಲ್ಲಿ ಬಂದವು. ಆರಂಭದಲ್ಲಿ, ಈ ಅಭಿವೃದ್ಧಿಯು ಹತ್ತಿ ಮತ್ತು ಸೆಣಬಿನ ಜವಳಿ ಗಿರಣಿಗಳ ಸ್ಥಾಪನೆಗೆ ಸೀಮಿತವಾಗಿತ್ತು. ಹತ್ತಿ ಜವಳಿ ಗಿರಣಿಗಳು ಹೆಚ್ಚಾಗಿ ದೇಶದ ಪಶ್ಚಿಮ ಭಾಗಗಳಾದ ಮಹಾರಾಷ್ಟ್ರ ಮತ್ತು ಗುಜರಾತ್‌ನಲ್ಲಿವೆ, ಸೆಣಬಿನ ಗಿರಣಿಗಳು ಮುಖ್ಯವಾಗಿ ಬಂಗಾಳದಲ್ಲಿ ಕೇಂದ್ರೀಕೃತವಾಗಿವೆ. ಹತ್ತಿ ಗಿರಣಿಗಳು ಹೆಚ್ಚಾಗಿ ಭಾರತೀಯರ ಒಡೆತನದಲ್ಲಿದ್ದರೆ, ಸೆಣಬಿನ ಗಿರಣಿಗಳು ಹೆಚ್ಚಾಗಿ ವಿದೇಶಿ ಒಡೆತನದಲ್ಲಿದ್ದವು. ಆದಾಗ್ಯೂ, 1907 ರಲ್ಲಿ ಟಾಟಾ ಐರನ್ ಮತ್ತು ಸ್ಟೀಲ್ ಕಂಪನಿ (ಟಿಸ್ಕೊ) ಅನ್ನು ಸಂಯೋಜಿಸಿದಾಗ ಇಪ್ಪತ್ತನೇ ಶತಮಾನದ ಆರಂಭದಲ್ಲಿ ಅತ್ಯಂತ ಮಹತ್ವದ ಬೆಳವಣಿಗೆ ಸಂಭವಿಸಿತು. ಸಕ್ಕರೆ, ಸಿಮೆಂಟ್, ಕಾಗದ ಇತ್ಯಾದಿ ಕ್ಷೇತ್ರಗಳಲ್ಲಿನ ಕೆಲವು ಕೈಗಾರಿಕೆಗಳು ಎರಡನೆಯ ವಿಶ್ವ ಸಮರದ ನಂತರ ಬಂದವು.

ಆದಾಗ್ಯೂ, ಭಾರತದಲ್ಲಿ ಮತ್ತಷ್ಟು ಕೈಗಾರಿಕೀಕರಣವನ್ನು ಉತ್ತೇಜಿಸಲು ಸಹಾಯ ಮಾಡಲು ಯಂತ್ರೋಪಕರಣಗಳ ತಯಾರಿಕೆಯಂತಹ ಯಾವುದೇ ಬಂಡವಾಳ ಸರಕು ಉದ್ಯಮವು ಇರಲಿಲ್ಲ. ಆದ್ದರಿಂದ, ಕೃಷಿಯಂತೆ, ಭಾರತವು ತನ್ನ ಕೈಗಾರಿಕಾ ನೆಲೆಯನ್ನು ಅಭಿವೃದ್ಧಿಪಡಿಸುವಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಲಿಲ್ಲ. ಬ್ರಿಟಿಷರ ಆಗಮನವು ಮೊದಲೇ ಹೇಳಿದಂತೆ ಆಂತರಿಕ ಯುದ್ಧಗಳಿಂದಾಗಿ ಕರಕುಶಲ ಕೈಗಾರಿಕೆಗಳ ನಾಶಕ್ಕೆ ಕಾರಣವಾಯಿತು. ಇದು ಭಾರಿ ನಿರುದ್ಯೋಗವನ್ನು ಸೃಷ್ಟಿಸಿತು ಮತ್ತು ಜನರು ಗ್ರಾಮೀಣ ಪ್ರದೇಶದತ್ತ ಸಾಗಲು ಮತ್ತು ಕೃಷಿಯನ್ನು ಉದ್ಯೋಗವಾಗಿ ಅಳವಡಿಸಿಕೊಳ್ಳಲು ಒತ್ತಾಯಿಸಿತು ಮತ್ತು ಇದು ಕೃಷಿಯ ಮೇಲೆ ಒತ್ತಡವನ್ನು ಉಂಟುಮಾಡಿತು. ಇದು ಉತ್ಪಾದನಾ ಘಟಕಗಳ ಸ್ಥಾಪನೆ ಮತ್ತು ಸಾಂಪ್ರದಾಯಿಕ ಕರಕುಶಲ ಕೈಗಾರಿಕೆಗಳ ಈ ಸಗಟು ಸ್ಥಳಾಂತರಕ್ಕೆ ಪರ್ಯಾಯವಾಗಿರಲಿಲ್ಲ. ಇದಲ್ಲದೆ, ಹೊಸ ಕೈಗಾರಿಕಾ ಕ್ಷೇತ್ರದ ಬೆಳವಣಿಗೆಯ ದರ ಮತ್ತು ಒಟ್ಟು ದೇಶೀಯ ಉತ್ಪನ್ನಕ್ಕೆ (ಜಿಡಿಪಿ) ಅದರ ಕೊಡುಗೆ ಬಹಳ ಕಡಿಮೆ.

ವಾಸ್ತವ ಸಂಗತಿಯೆಂದರೆ ವಸಾಹತುಶಾಹಿ ನೀತಿಯು ಎರಡು ನಿರ್ದಿಷ್ಟ ಕಾರಣಗಳಿಗಾಗಿ ಭಾರತದಲ್ಲಿ ಕೈಗಾರಿಕೀಕರಣಕ್ಕೆ ವಿರುದ್ಧವಾಗಿದೆ. ಒಂದು, ಭಾರತವನ್ನು ಬ್ರಿಟನ್‌ನಲ್ಲಿ ಮುಂಬರುವ ಆಧುನಿಕ ಕೈಗಾರಿಕೆಗಳಿಗೆ ಕೇವಲ ಪ್ರಮುಖ ಕಚ್ಚಾ ವಸ್ತುಗಳ ರಫ್ತುದಾರರ ಸ್ಥಿತಿಗೆ ತಗ್ಗಿಸುವುದು ಮತ್ತು ಎರಡು, ಆ ಕೈಗಾರಿಕೆಗಳ ಸಿದ್ಧಪಡಿಸಿದ ಉತ್ಪನ್ನಗಳಿಗೆ ಭಾರತವನ್ನು ವಿಸ್ತಾರವಾದ ಮಾರುಕಟ್ಟೆಯಾಗಿ ಪರಿವರ್ತಿಸುವುದು.

## ವಿದೇಶಿ ವ್ಯಾಪಾರದ ಸ್ಥಿತಿ

ಕೃಷಿ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಚಾಲ್ತಿಯಲ್ಲಿರುವ ಸ್ಥಿತಿಗಳು ದೇಶದ ವಿದೇಶಿ ವ್ಯಾಪಾರದ ಮೇಲೆ ಪರಿಣಾಮ ಬೀರಿದವು. ಕೃಷಿಯ ವ್ಯಾಪಾರೀಕರಣವು ಭಾರತವನ್ನು ಕಚ್ಚಾ ರೇಷ್ಮೆ, ಹತ್ತಿ, ಉಣ್ಣೆ, ಸಕ್ಕರೆ, ಇಂಡಿಗೊ, ಸೆಣಬಿನಂತಹ ಪ್ರಾಥಮಿಕ ಉತ್ಪನ್ನಗಳ ರಫ್ತುದಾರನಾಗುವಂತೆ ಮಾಡಿತು. ರಫ್ತು ಮಾಡುವ ಪ್ರಮುಖ ತಾಣವೆಂದರೆ ಇಂಗ್ಲೆಂಡ್, ಅಲ್ಲಿನ ಕೈಗಾರಿಕೆಗಳು ಈ ಕಚ್ಚಾ ವಸ್ತುಗಳನ್ನು ಗ್ರಾಹಕ ವಸ್ತುಗಳನ್ನು ಉತ್ಪಾದಿಸಲು ಮತ್ತು ಭಾರತಕ್ಕೆ ಹಿಂತಿರುಗಿ ರಫ್ತು ಮಾಡಲು ಬಳಸಿದವು. ಸಿದ್ಧಪಡಿಸಿದ ಗ್ರಾಹಕ ವಸ್ತುಗಳನ್ನು ಉತ್ಪಾದಿಸಲು ಭಾರತಕ್ಕೆ ಸಾಕಷ್ಟು ಕೈಗಾರಿಕೆಗಳಿಲ್ಲದ ಕಾರಣ, ಅದು ಹತ್ತಿ, ರೇಷ್ಮೆ ಮತ್ತು ಉಣ್ಣೆಯ ಬಟ್ಟೆಗಳು ಮತ್ತು ಬ್ರಿಟನ್‌ನಿಂದ ಬೆಳಕಿನ ಯಂತ್ರೋಪಕರಣಗಳಂತಹ ಬಂಡವಾಳ ಸರಕುಗಳ ಆಮದುದಾರವಾಯಿತು. ಆದ್ದರಿಂದ ಎಲ್ಲಾ ಪ್ರಾಯೋಗಿಕ ಉದ್ದೇಶಗಳಿಗಾಗಿ, ಬ್ರಿಟನ್ ಭಾರತದ ರಫ್ತು ಮತ್ತು ಆಮದಿನ ಮೇಲೆ ಏಕಸ್ವಾಮ್ಯದ ನಿಯಂತ್ರಣವನ್ನು ಕಾಯ್ದುಕೊಂಡಿದೆ. ಭಾರತದ ಅರ್ಧಕ್ಕಿಂತ ಹೆಚ್ಚು ವಿದೇಶಿ ವ್ಯಾಪಾರವು ಬ್ರಿಟನ್‌ಗೆ ಮಾತ್ರ ಸೀಮಿತವಾಗಿದೆ ಎಂದು ಕಂಡುಬಂದಿದೆ. 1869 ರಲ್ಲಿ

ಸೂಯೆಜ್ ಕಾಲುವೆಯ ತೆರೆಯುವಿಕೆಯು ಭಾರತದ ವಿದೇಶಿ ವ್ಯಾಪಾರದ ಮೇಲೆ ಬ್ರಿಟಿಷ್ ನಿಯಂತ್ರಣವನ್ನು ಇನ್ನಷ್ಟು ತೀವ್ರಗೊಳಿಸಿತು. ಭಾರತವು ರಫ್ತು ಹೆಚ್ಚುವರಿಯನ್ನು ಉತ್ಪಾದಿಸಬಹುದಾದರೂ, ಚಿನ್ನ ಅಥವಾ ವಿದೇಶಿ ಕರೆನ್ಸಿಯ ಒಳಹರಿವು ಅಷ್ಟೇನೂ ಇರಲಿಲ್ಲ, ಏಕೆಂದರೆ ಬ್ರಿಟನ್‌ನಲ್ಲಿ ವಸಾಹತುಶಾಹಿ ಸರ್ಕಾರವು ಸ್ಥಾಪಿಸಿದ ಕಛೇರಿಯಿಂದ ಮಾಡಿದ ಖರ್ಚನ್ನು ಭರಿಸಲು, ಯುದ್ಧಗಳ ವೆಚ್ಚಗಳು ವಸಾಹತುಶಾಹಿ ಮತ್ತು ವಿಶ್ವದ ವಿವಿಧ ಭಾಗಗಳಲ್ಲಿ ಬ್ರಿಟಿಷ್ ಸರ್ಕಾರವು ಅದೃಶ್ಯ ವಸ್ತುಗಳನ್ನು ಆಮದು ಮಾಡಿಕೊಳ್ಳಲು ಬ್ರಿಟಿಷ್ ಆಡಳಿತವು ಹೆಚ್ಚುವರಿ ಹಣವನ್ನು ಬಳಸಿಕೊಂಡಿತು. ಈ ರೀತಿಯಾಗಿ ಬ್ರಿಟಿಷರು ಭಾರತದ ಸಂಪತ್ತನ್ನು ಹೊರಹಾಕಲು ವಿದೇಶಿ ವ್ಯಾಪಾರವನ್ನು ಬಳಸಿದರು. ಭಾರತವು ವ್ಯಾಪಾರ ಸಂಬಂಧವನ್ನು ಹೊಂದಿರುವ ಇತರ ದೇಶಗಳಲ್ಲಿ ಚೀನಾ, ಸಿಲೋನ್ (ಶ್ರೀಲಂಕಾ) ಮತ್ತು ಪರ್ಷಿಯಾ (ಇರಾನ್) ಸೇರಿವೆ.

## ಉಪಸಂಹಾರ

1921 ರ ಜನಗಣತಿಯಿಂದ ಪ್ರಾರಂಭವಾದ ಹೆಚ್ಚಿನ ಜನಸಂಖ್ಯಾ ಬೆಳವಣಿಗೆಯೊಂದಿಗೆ ಭಾರತವು ಈಗಾಗಲೇ ಜನಸಂಖ್ಯಾ ಪರಿವರ್ತನೆಯ ಎರಡನೇ ಹಂತವನ್ನು ಪ್ರವೇಶಿಸಿತ್ತು. ಶೈಕ್ಷಣಿಕ ಸಾಧನೆಗಳು ಮತ್ತು ಆರೋಗ್ಯ ರಕ್ಷಣೆಯಿಂದ ಸೂಚಿಸಲಾದ ಜೀವನದ ಗುಣಮಟ್ಟವು ತುಂಬಾ ಕಳಪೆಯಾಗಿತ್ತು. ಜನಸಂಖ್ಯೆಯ ಶೇಕಡಾ 84 ರಷ್ಟು ಅನಕ್ಷರಸ್ಥರಾಗಿದ್ದರೆ, ಜೀವಿತಾವಧಿ 32 ವರ್ಷಗಳಷ್ಟು ಕಡಿಮೆಯಾಗಿದೆ. ಶಿಶುಗಳ ಮರಣ ಪ್ರಮಾಣವು ಸಾವಿರಕ್ಕೆ 281 ರಷ್ಟಿದೆ. ರೈಲ್ವೆಗಳ ರಚನೆಯು ಬ್ರಿಟಿಷ್ ಆಡಳಿತವು ಭಾರತಕ್ಕೆ ಉಡುಗೊರೆಯಾಗಿ ನೀಡಿದ ಪ್ರಮುಖ ಮೂಲಸೌಕರ್ಯವಾಗಿದೆ. ಆದಾಗ್ಯೂ, ಇದರ ಮುಖ್ಯ ಉದ್ದೇಶವೆಂದರೆ ಭಾರತದ ಜನರಿಗಿಂತ ವಸಾಹತುಶಾಹಿ ಹಿತಾಸಕ್ತಿಗಾಗಿ ಕಚ್ಚಾ ವಸ್ತುಗಳು ಮತ್ತು ಸೈನ್ಯವನ್ನು ಸಾಗಿಸುವುದು. ಭಾರತದ ಒಟ್ಟು ಉದ್ಯೋಗಿಗಳ ಪೈಕಿ ಸುಮಾರು ನಾಲ್ಕನೇ ಒಂದು ಭಾಗವು ಕೃಷಿಯ ಮೇಲೆ ಅವಲಂಬಿತವಾಗಿದೆ, ಇದರಿಂದಾಗಿ ದೇಶವು ಪ್ರಾಥಮಿಕ ಉತ್ಪಾದನೆ ಮತ್ತು ಕೈಗಾರಿಕೆಯಲ್ಲಿ ಹಿಂದುಳಿದಿದೆ. ಭಾರೀ ಜನಸಂಖ್ಯೆಯ ಒತ್ತಡ, ಜಮೀನ್ದಾರಿ ವ್ಯವಸ್ಥೆಯ ಹರಡುವಿಕೆ ಮತ್ತು ವಾಣಿಜ್ಯೀಕರಣದಿಂದಾಗಿ ಭಾರತೀಯ ಕೃಷಿ ನಷ್ಟ ಅನುಭವಿಸಿತು. ಬ್ರಿಟನ್ ಭಾರತದ ಪ್ರಮುಖ ವ್ಯಾಪಾರ ಪಾಲುದಾರನಾಗಿ ಉಳಿದಿದೆ ಮತ್ತು ಭಾರತದ ಸಂಪತ್ತನ್ನು ಹೊರಹಾಕಲು ವಿದೇಶಿ ವ್ಯಾಪಾರವನ್ನು ಬಳಸಿಕೊಂಡಿತು.